ದಿಃ14.11.2022 O S No.78/2017 PW-1

ದಿಃ14.11.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಎಸ್ ವಕೀಲರಿಂದ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಷೆಡ್ಯೂಲ್‌ನ ಎಲ್ಲಾ ಸ್ವತ್ತುಗಳ ಖಾತೆ ನಮ್ಮ ತಂದೆ ಹೆಸರಿನಲ್ಲಿ ಇತ್ತು ಎಂದು ನಮೂದು ಮಾಡಿಸಿದ್ದೇನೆ. ನಮ್ಮ ತಂದೆ ಹೆಸರಿನಲ್ಲಿ ದಾವಾ ಷೆಡ್ಯೂಲ್‌ನ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲಾತಿಗಳನ್ನು ಪಂಚಾಯ್ತಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಮ್ಮ ತಂದೆ ಹೆಸರಿನಲ್ಲಿ ಇರುವ ದಾವಾ ಷೆಡ್ಯೂಲ್‌ನ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಒಟ್ಟಿನಲ್ಲಿ ಎಲ್ಲಾ ದಾಖಲಾತಿಗಳನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. ದಾವಾ ಐಟಂ ನಂಬರ್ 3ರ ಚೆಕ್ಕು ಬಂಧಿ ನನಗೆ ಹೇಳಲು ಗೊತ್ತಾಗುವುದಿಲ್ಲ. ದಾವಾ ಸಲ್ಲಿಸುವ ಸಂದರ್ಭದಲ್ಲಿ ದಾವಾ ಐಟಂ ನಂಬರ್ 3ರ ಚೆಕ್ಕು ಬಂಧಿಯನ್ನು ನಮೂದಿಸಿ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ಯಾವುದೇ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಯ ಮರಣಾನಂತರ ನಮ್ಮ ತಾಯಿಯ ಹೆಸರಿಗೆ ದಾಖಲಾಗಿದ್ದು ಯಾವ ಯಾವ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಕಾಲಕ್ಕೆ ನಮ್ಮ ತಂದೆ ಹೆಸರಿನಲ್ಲಿ ಇಂದಂತಹ ಸ್ವತ್ತು ಮತ್ತು ನಮ್ಮ ತಾಯಿಯ ಹೆಸರಿನಲ್ಲಿ ಇದಂತಹ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ್ 1 ಮತ್ತು 2 ಮಾರಾಟ ಮಾಡುವ ಕಾಲಕ್ಕೆ ಯಾರ ಹೆಸರಿನಲ್ಲಿ ಖಾತೆ ಇತ್ತು ಎಂದು ತಿಳಿದುಕೊಂಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಪಂಚಾಯ್ತಿಯನ್ನು ಯಾವ ವಿಚಾರಕ್ಕಾಗಿ ಮಾಡಿಸಿದೆವು ಎಂದು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತುಗಳನ್ನು ಯಾವ ವಿಚಾರಕ್ಕಾಗಿ ಮಾರಾಟ ಮಾಡಿದ್ದೀರಾ ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್ 1 ಸ್ವತ್ತನ್ನು ಮಾರಾಟ ಮಾಡಿ ನಿಮ್ಮ ತಂಗಿ

ಮತ್ತು ನಿಮ್ಮ ಮಗಳ ಮದುವೆಯನ್ನು ಒಂದೇ ದಿನಾಂಕದಂದು ಮದುವೆ ಮಾಡಿದ್ದಾರೆ ಎಂದರೆ ಸಾಕ್ಷಿ ಒಂದೇ ದಿನಾಂಕದಂದು ಮದುವೆ ಮಾಡದೆವು ಆದರೆ ಜಮೀನನ್ನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮಗಳ ಮದುವೆ ಮತ್ತು ನಿಮ್ಮ ತಂಗಿ ಮದುವೆ ಸೂಳೇರಿ ಗ್ರಾಮದಲ್ಲಿ ನೆರವೇರಿತು ಎಂದರೆ ಸರಿ. ನಿಮ್ಮ ಮಗಳ ಹೆಸರು ಸುನಂದ ಎಂಂದರೆ ಸರಿ. ನಿಮ್ಮ ಮಗಳ ಮದುವೆ ಖರ್ಚುನ್ನು ಪ್ರತಿವಾದಿ 1 ಮತ್ತು 2ರವರು ಬರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವ ವಿಚಾರಗಳು ಸತ್ಯ. ದಾವಾ ಐಟಂ ನಂಬರ್ 3ರ ಚೆಕ್ಕು ಬಂಧಿ ಪೂರ್ವಕ್ಕೆ ರಾಮಣ್ಣ ಸ್ವತ್ತು, ಪಶ್ಚಿಮಕ್ಕೆ ಸರ್ಕಾರಿ ಹಳ್ಳ, ಉತ್ತರಕ್ಕೆ ಕೆಂಪಮ್ಮ ಸ್ವತ್ತು ದಕ್ಷಿಣಕ್ಕೆ ಕುಂಟ ಮೇಸ್ಟರ್ ಸ್ವತ್ತು ಎಂದು ದಾವೆಯಲ್ಲಿ ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ವಂಶವೃಕ್ಷವನ್ನು ನಮ್ಮ ಊರಿನವೇ ಹೇಳಿ ಮಾಡಿಸಿರುತ್ತಾರೆ. ಅವರ ಹೆಸರು ನನಗೆ ನೆನಪಿಲ್ಲ. ನಮ್ಮ ಊರಿನವರಿಗೆ ನಮ್ಮ ತಂದೆಯ ಮನೆಯ ವಿಚಾರ ಗೊತ್ತಿಲ್ಲ. ನಮ್ಮ ತಂದೆಗೆ ಮಾತು ಬರುತ್ತಿರಲ್ಲಿ ಎಲ್ಲಾ ವ್ಯವಹಾರವನ್ನು ನಮ್ಮತಾಯಿಯ ನೋಡಿಕೊಳ್ಳುತ್ತಿದ್ದರು. ನಿಮ್ಮ ಮದುವೆಯ ಕಾಲಕ್ಕೆ 2ನೇ ಪ್ರತಿವಾದಿ ಚಿಕ್ಕವನಿದ್ದ ಕಾರಣ ಬೇರೆ ದಾರಿ ಇಲ್ಲದೆ ದಾವಾ ಐಟಂ ನಂಬರ್ 1ನ್ನು ಮಾರಾಟ ಮಾಡಿ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 2 ನ್ನು ಮಾರಾಟ ಮಾಡಿ 2ನೇ ಪ್ರತಿವಾದಿ ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಯಾವ ಯಾವ ವಿಚಾರಕ್ಕೆ ದಾವಾ ಐಟಂ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದು ಗೊತ್ತಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೀರಾ ಎಂದರೆ ಸಾಕ್ಷಿ ಎಲ್ಲರ ಮದುವೆಗಳು ಮುಗಿದ ನಂತರ ದಾವಾ ಐಟಂ ಸ್ವತ್ತುಗಳನ್ನು ಮಾರಾಟ ಮಾಡಿಕೊಂಡಿರುವುದು ಎಂದು ನುಡಿಯುತ್ತಾರೆ. ಸದರಿ ವಿಚಾರ 1, 3 ರಿಂದ 5ನೇ ಪ್ರತಿವಾದಿಗಳಿಗೆ ಗೊತ್ತಿದೆ. ನಿಮ್ಮ ಹಿರಿಯ ಮಗಳ ವಿರುದ್ದ 2ನೇ ಪ್ರತಿವಾದಿ ದಾವೆಯನ್ನು ಸಲ್ಲಿಸಿದ ನಂತರ ನೀವು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ದ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಹಿರಿಯ ಮಗಳು ಮತ್ತು ಅಳಿಯನ ಮಾತು ಕೇಳಿಕೊಂಡು ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಯಾವುದಾದರೂ ಆಸ್ತಿ ಇತ್ತೇ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ 2 ರಿಂದ 5ನೇ ಪ್ರತಿವಾದಿಗಳಿಗೆ ಮದುವೆ ಮಾಡುವ ಸಂದರ್ಭದಲ್ಲಿ ಯಾವ ಆದಾಯ ಇತ್ತು ಎಂದರೆ ಮಾವಿನ ತೋಟ, ಕಡಲೆಕಾಯಿ, ರಾಗಿ

ಬೆಳೆಯುತ್ತಿದ್ದೆವು ಆದರಿಂದ ಬಂದ ಆದಾಯ ಇತ್ತು ಎಂದು ನುಡಿಯುತ್ತಾರೆ. ಆದಾಯ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಯಾವುದೇ ಆದಾಯ ಇಲ್ಲದ ಕಾರಣ 1 ನೇ ಪ್ರತಿವಾದಿ 2 ರಿಂದ 5 ನೇ ಪ್ರತಿವಾದಿಗಳ ಮದುವೆ ಮತ್ತು ಇತರೆ ಸಾಲಗಳನ್ನು ತೀರಿಸಲು ದಾವಾ ಐಟಂ ನಂಬರ್ 1 ಮತ್ತು 2 ನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದ ಕಾರಣ 2016 ರವರೆಗೂ ಯಾವುದೇ ದಾವೆಯನ್ನು ಪ್ರತಿವಾದಿಗಳ ವಿರುದ್ದ ಸಲ್ಲಿಸಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹಿರಿಯ ಮಗಳೊಂದಿಗೆ 2 ನೇ ಪ್ರತಿವಾದಿ ರಾಜಿ ಮಾಡಿಕೊಳ್ಳದೇ ಇರುವ ಕಾರಣ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯ ಬಗ್ಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರು ಸಹ ನನ್ನ ಮಗಳು ಮತ್ತು ಅಳಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.